# ನಿಸ್ವಾರ್ಥ ನಾಯಕ!

■ ಪ್ರವೀಣ ಕುಲಕರ್ಣಿ



‘ಏಕದಿನ ಕ್ರಿಕೆಟ್‌ನಲ್ಲಿ ವಿರಾಟ್ ಕೊಹ್ಲಿ ಶತಕಗಳ ಅರ್ಧಶತಕ ದಾಖಲಿಸಿರಬಹುದು. ಶ್ರೇಯಸ್ ಅಯ್ಯರ್, ಮೊಹಮ್ಮದ್ ಶಮಿ ಸಹ ಅದ್ಭುತ ಫಾರ್ಮ್‌ನಲ್ಲಿ ಇರಬಹುದು. ನನ್ನ ದೃಷ್ಟಿಯಲ್ಲಿ ಈ ವಿಶ್ವಕಪ್‌ನ ಭಾರತದ ನೈಜ ಹೀರೊ ಎಂದರೆ ಅದು ರೋಹಿತ್ ಶರ್ಮಾ’ ಎನ್ನುತ್ತಾರೆ ಇಂಗ್ಲೆಂಡ್ ತಂಡದ ಮಾಜಿ ನಾಯಕ ನಾಸಿರ್ ಹುಸೇನ್. ಹೌದು, ಭಾರತ ತಂಡದ ಅತ್ಯದ್ಭುತ ಎನಿಸುವಂತಹ ಸದ್ಯದ ಫಾರ್ಮ್‌ಗೆ ಕೋಚ್ ರಾಹುಲ್ ದ್ರಾವಿಡ್ ಅವರ ಪಾತ್ರ ಎಷ್ಟಿದೆಯೋ ನಾಯಕ ರೋಹಿತ್ ಪಾತ್ರವೂ ಅಷ್ಟೇ ಇದೆ. ತಂಡವು ಅಷ್ಟೊಂದು ಉತ್ಸಾಹದ ಬುಗ್ಗೆಯಾಗಿರುವ ಹಿಂದೆ ಈ ಆಟಗಾರನ ಶ್ರಮವೂ ದೊಡ್ಡದಾಗಿದೆ.

ನಾಸಿರ್ ಅವರ ಮಾತಿಗೆ ಪಾಕಿಸ್ತಾನದ ಮಾಜಿ ವೇಗಿ ಶೋಯಬ್ ಅಖ್ತರ್ ಕೂಡ ಧ್ವನಿಗೂಡಿಸುತ್ತಾರೆ. ‘ಕೊಹ್ಲಿ ಅವರಂತೆಯೇ ರೋಹಿತ್ ಕೂಡ ಶತಕಗಳ ಅರ್ಧಶತಕ ದಾಖಲಿಸಬಲ್ಲರು. ಅವರಿಗೆ ಅದು ದೊಡ್ಡ ವಿಷಯವೇ ಅಲ್ಲ. ಆದರೆ, ತಂಡಕ್ಕಾಗಿ ಅದ್ಭುತ ಆರಂಭವನ್ನು ಒದಗಿಸಿಕೊಡುವ ಭರದಲ್ಲಿ ವೈಯಕ್ತಿಕ ದಾಖಲೆಗಳ ವಿಷಯವನ್ನು ಅವರು ಬದಿಗೆ ಇಟ್ಟಿದ್ದಾರೆ’ ಎಂದು ಅಖ್ತರ್ ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ತಂಡವೊಂದರ ಯಶಸ್ಸಿನ ಯಾತ್ರೆಗೆ ಗಟ್ಟಿ ಅಡಿಪಾಯ ಬೀಳುವುದು ಆ ತಂಡದ ಆರಂಭಿಕ ಬ್ಯಾಟ್ಸ್‌ಮನ್‌ಗಳು ಹೇಗೆ ಆಡುತ್ತಾರೆ ಎನ್ನುವುದರ ಮೇಲೆ ಅವಲಂಬಿತವಾಗಿದೆ. ‘ಸಾಧ್ಯವಾದಷ್ಟು ರಕ್ಷಣಾತ್ಮಕವಾಗಿ ಆಡು, ವೇಗಿಗಳ ದಾಳಿಯನ್ನು ಸಾವಧಾನದಿಂದ ಎದುರಿಸು’ ಎನ್ನುವುದೀಗ ಓಬಿರಾಯನ ಕಾಲದ ಮಂತ್ರ. ಆರಂಭದಲ್ಲೇ ಚೆನ್ನಾಗಿ ಚಚ್ಚುವುದು, ಎದುರಾಳಿ ಬೌಲರ್‌ಗಳ ಆತ್ಮವಿಶ್ವಾಸ ಕುಗ್ಗಿಸುವುದು ಇಂದಿನ ಯಶಸ್ಸಿನ ಗುಟ್ಟು. ಆರಂಭಿಕ ಬ್ಯಾಟ್ಸ್‌ಮನ್‌ಗಳು ಚೆನ್ನಾಗಿ ಆಡಿ, ಒಳ್ಳೆಯ ಸ್ಕೋರ್ ಪೇರಿಸಿಕೊಟ್ಟರೆ ಮಧ್ಯಮ ಕ್ರಮಾಂಕದಲ್ಲಿ ಆಡಲು ಬರುವವರ ಕೆಲಸ ತುಂಬಾ ಸಲೀಸು. ಆ ನಿಟ್ಟಿನಲ್ಲಿ ಉಳಿದವರಂತೆ ಶತಕ, ಅರ್ಧಶತಕ ಹೊಡೆಯದಿದ್ದರೂ ರೋಹಿತ್ ತಂಡಕ್ಕೆ ನೀಡಿದ ಕೊಡುಗೆ ಬಲು ದೊಡ್ಡದು.

ಪವರ್‌ಪ್ಲೇ ಆಟಕ್ಕೆ ಹೊಸ ವ್ಯಾಖ್ಯಾನವನ್ನೇ ನೀಡಿದ್ದಾರೆ ಭಾರತದ ಈ ನಾಯಕ. ಇನ್ನೊಂದೆಡೆ ಶುಭ್ಮನ್ ಗಿಲ್ ಅವರಿಗೆ ತಳವೂರಲು ಅವಕಾಶ ನೀಡುತ್ತಾ, ವೇಗಿಗಳನ್ನು ಎದುರಿಸುವ ಬಹುಪಾಲು ಹೊಣೆಯನ್ನು ತಾವೇ ನಿಭಾಯಿಸುತ್ತಾ ಚೆಂಡನ್ನು ಬಾರಿ ಬಾರಿ ಬೌಂಡರಿ ಗೆರೆ ದಾಟಿಸುವ ರೋಹಿತ್, ತಂಡದ ಮುಂದಿನ ಹಾದಿಯನ್ನು ಸುಗಮಗೊಳಿಸುತ್ತಾ ಬಂದವರು. ಏಕದಿನ ಕ್ರಿಕೆಟ್‌ನಲ್ಲಿ ದ್ವಿಶತಕ ಬಾರಿಸಿದ ಹಿರಿಮೆಯನ್ನೂ ಹೊಂದಿರುವ ಈ ಆಟಗಾರನಿಗೆ ಶೋಯಬ್ ಹೇಳಿದಂತೆ, ಶತಕ, ಅರ್ಧಶತಕ ದಾಖಲಿಸುವುದು ದೊಡ್ಡ ವಿಷಯವಲ್ಲ. ಆದರೆ, ತಂಡದ ಹಿತಕ್ಕಾಗಿ ನಿಸ್ವಾರ್ಥವಾಗಿ ಆಡುತ್ತಿರುವ ರೋಹಿತ್, ದಾಖಲೆಗಳನ್ನು ನಿರ್ಮಿಸುವುದಕ್ಕಾಗಿ ಆಟದ ವೇಗವನ್ನು ಕುಗ್ಗಿಸುವುದಿಲ್ಲ. ರಕ್ಷಣಾತ್ಮಕವಾಗಿ ಆಡುತ್ತಾ, ಎಸೆತಗಳನ್ನು ವ್ಯರ್ಥಗೊಳಿಸುವುದಿಲ್ಲ. ಪ್ರಸಕ್ತ ವಿಶ್ವಕಪ್ ಟೂರ್ನಿಯಲ್ಲಿ ಅವರು ಗಳಿಸಿದ ರನ್‌ಗಳೇ ಈ ಮಾತು ನಿಜವೆಂದು ಹೇಳುತ್ತವೆ. ಈ ಟೂರ್ನಿಯ ಪಂದ್ಯಗಳಲ್ಲಿ ಅವರು ಗಳಿಸಿದ ರನ್‌ಗಳು ಹೀಗಿವೆ: 131, 86, 48, 46, 87, 4, 40, 61 ಮತ್ತು 47 (ಫೈನಲ್ ಹೊರತುಪಡಿಸಿ). ಅವರ ಸ್ಟ್ರೈಕ್ ರೇಟ್ 124.15ರಷ್ಟಿದೆ. ಭಾರತ ತಂಡವು ದೊಡ್ಡ ಗುರಿಯನ್ನು ನಿಗದಿ ಮಾಡಲಿಕ್ಕಾಗಲಿ, ಎದುರಾಳಿ ಮೊತ್ತವನ್ನು ಯಶಸ್ವಿಯಾಗಿ ಬೆನ್ನಟ್ಟಲಿಕ್ಕಾಗಲಿ ರೋಹಿತ್ ಅವರ ಆಟ ತುಂಬಾ ನೆರವಿಗೆ ಬಂದಿದೆ.

ರೋಹಿತ್ ಅವರಿಗೆ ರಕ್ಷಣಾತ್ಮಕವಾಗಿ ಆಡಿ ಗೊತ್ತಿಲ್ಲವೇ? ಖಂಡಿತವಾಗಿಯೂ ಗೊತ್ತು. ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಭಾರತ ತಂಡ ಬಹುಬೇಗ ಕೆಲವು ವಿಕೆಟ್‌ಗಳನ್ನು ಕಳೆದುಕೊಂಡಾಗ ಗೋಡೆಯಂತೆ ನಿಂತು, ತಂಡದ ಯಶಸ್ಸಿನಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದು ಕೂಡ ಇದೇ ಆಟಗಾರ. ಆದರೆ, ಮೊದಲ ಹತ್ತು ಓವರ್‌ಗಳಲ್ಲಿ ಸಾಧ್ಯವಾದಷ್ಟು ಆಕ್ರಮಣಕಾರಿಯಾಗಿ ಆಡಿ, ರನ್ ಸಂಗ್ರಹಿಸು ಎನ್ನುವುದು ಈ ವಿಶ್ವಕಪ್‌ನ ಮಂತ್ರ. ಅದನ್ನು ಅಷ್ಟೇ ಪರಿಣಾಮಕಾರಿಯಾಗಿ ರೂಢಿಸಿಕೊಂಡವರು ರೋಹಿತ್. ವಿಶ್ವಕಪ್ ಟೂರ್ನಿಯೊಂದರಲ್ಲಿ ಅತೀ ಹೆಚ್ಚು ಸಿಕ್ಸರ್ ಗಳಿಸಿದ ದಾಖಲೆಯನ್ನು ತಮ್ಮ ಹೆಸರಿಗೆ ಬರೆಸಿಕೊಂಡಿರುವ ಅವರೀಗ ‘ಸಿಕ್ಸರ್ ಶರ್ಮಾ’. ಮೈಲಿಗಲ್ಲುಗಳು ಹತ್ತಿರವಾದಾಗ ನಿಧಾನಗತಿಯ ಬ್ಯಾಟಿಂಗ್‌ಗೆ ಅವರು ಇಳಿದವರಲ್ಲ. ದೊಡ್ಡ ಹೊಡೆತಗಳಿಗೆ ಹಿಂದು ಮುಂದು ನೋಡಿದವರಲ್ಲ. ಹೀಗಾಗಿಯೇ 40ರಲ್ಲಿ, 80ರಲ್ಲಿ ಅವರು ಹೆಚ್ಚಿನ ಬಾರಿ ಔಟ್ ಆಗಿದ್ದು. ತಂಡದ ನಾಯಕನಾಗಿ ಇತರ ಆಟಗಾರರಿಗೆ ಮಾದರಿ ಎನಿಸುವಂತಹ ವರ್ತನೆ ತೋರುತ್ತಿರುವ ರೋಹಿತ್, ವೇಗದ ರನ್ ಗಳಿಕೆಗಾಗಿ ಹಲವು ಬಾರಿ ಹರಕೆಯ ಕುರಿಯಾದವರು.

ತಂಡದ ಒಗ್ಗಟ್ಟನ್ನು ಕಾಯ್ದುಕೊಂಡು, ಎಲ್ಲರಲ್ಲೂ ವಿಶ್ವಾಸ, ಉತ್ಸಾಹ ತುಂಬುತ್ತಾ ರೋಹಿತ್ ಮುಂದೆ ಸಾಗುತ್ತಿರುವ ರೀತಿಯೇ ಚಂದ. ಯುವ ಆಟಗಾರರಲ್ಲೂ ಆತ್ಮವಿಶ್ವಾಸ ತುಂಬುತ್ತಾ, ಅಂಗಳದಲ್ಲಿ ಎದುರಾಳಿಗಳ ಆಕ್ರಮಣ ನಡೆದಾಗ ಎದೆಗುಂದದೆ ಸಮಚಿತ್ತದಿಂದ ಬೌಲರ್‌ಗಳನ್ನು ಹುರಿದುಂಬಿಸುತ್ತಾ ತಂಡವನ್ನು ಯಶಸ್ಸಿನತ್ತ ಮುನ್ನಡೆಸುತ್ತಿರುವ ರೋಹಿತ್ ಒಬ್ಬ ನೈಜ ನಾಯಕ. 2011ರ ವಿಶ್ವಕಪ್ ಟೂರ್ನಿಯ ತಂಡದಲ್ಲಿ ಸ್ಥಾನ ಪಡೆಯುವಲ್ಲಿಯೇ ವಿಫಲವಾಗಿದ್ದ ಈ ಅದ್ಭುತ ಆಟಗಾರ, ಇಂದು ಏರಿದ ಎತ್ತರ ಬೆರಗು ಮೂಡಿಸುವಂಥದ್ದು. ತಂಡವನ್ನು ಎತ್ತರಕ್ಕೆ ಒಯ್ಯುವ ಛಾತಿಯನ್ನೂ ಅವರು ಪ್ರದರ್ಶಿಸುತ್ತಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.

Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65